ಚಿಕಿತ್ಸಾತ್ಮಕ ಗುಣವುಳ್ಳ ಅಗಸೆ/ ಅಗಸೆ ಉಪಯೋಗದಿಂದ ಉತ್ತಮ ಆರೋಗ್ಯ

ಪಟ್ಟಣದ ಪ್ರದೇಶಗಳಲ್ಲಿರುವ ಜನರು ಹಲವಾರು ತರಹದ ಶ್ರೀಮಂತ ರೋಗಗಳಾದ ಮಧುಮೇಹ, ರಕ್ತದೊತ್ತಡ, ಕ್ಯಾನ್ಸರ್ ಮತ್ತು ಹೃದಯ ರೋಗಗಳಿಂದ ಬಳಲುತ್ತಿರುವರು. ಅವರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾವಿರಗಟ್ಟಲೇ ಹಣವನ್ನು ವೆಚ್ಚ ಮಾಡುವುದಲ್ಲದೇ ತಿಂಗಳಿಗೊಮ್ಮೆ ಆಸ್ಪತ್ರೆಗಳ ಭೇಟಿ ದೇವಾಲಯಗಳ ಭೇಟಿ ಆದಂತಾಗಿದೆ.

ರೋಗಿಯೊಬ್ಬನೆ ತೊಂದರೆಗೀಡಾಗುವುದಲ್ಲದೇ ಕುಟುಂಬದ ಸದಸ್ಯರು ಇವರ ಕಾಳಜಿ ಮಾಡಬೇಕಾಗುವುದು. ಇಂತಹ ಸಂದರ್ಭಗಳಲ್ಲಿ ನಮ್ಮ ಮನೆಯಲ್ಲಿರುವ ಆಹಾರವೇ ನಮಗೆ ವೈದ್ಯ ಎನ್ನುವುದು ಸತ್ಯ. ಈ ವಿಷಯ ನಮಗೆ ಗೊತ್ತಿಲ್ಲದಿರಬಹುದು ಆದರೆ ಈ ಮೇಲೆ ಹೆಸರಿಸಿದ ಎಲ್ಲ ರೋಗಗಳನ್ನು ಹತೋಟಿಯಲ್ಲಿಡಲು ಬೇಕಾಗುವ ಚಿಕಿತ್ಸಾತ್ಮಕ ಗುಣಗಳನ್ನು ಅಗಸೆ ಹೊಂದಿರುವುದು.

- ಸ್ತನ, ಪ್ರೊಸ್ಟೇಟ್ ಮತ್ತು ಕೊಲಾನ್ ಬಗೆಯ ಕ್ಯಾನ್ಸರ್ ರೋಗವನ್ನು ತಡೆಗಟ್ಟುವ ಗುಣ ಹೊಂದಿರುತ್ತದೆ.
- ಎಲಬು ಸವೆಯುವಿಕೆಯನ್ನು ನಿಯಂತ್ರಿಸುವುದು ಹಾಗೂ ಎಲಬು ಸಾಂದ್ರತೆಯನ್ನು ಹೆಚ್ಚಿಸುವುದು
- ಶರೀರಕ್ಕೆ ಬೇಡವಾದ ಕೊಲೆಸ್ಟ್ರಾಲ್‌ನ್ನು ಕಡಿಮೆ ಮಾಡುವುದು. ಆದ್ದರಿಂದ ಇದು ಹೃದಯ ಸಂಬಂಧಿ ಕಾಯಿಲೆಯನ್ನು ಹತೋಟಿಯಲ್ಲಿಡುವುದು
- ಮೂತ್ರಪಿಂಡ ಸರಿಯಾಗಿ ಕೆಲಸ ನಿರ್ವಹಿಸಲು ಸಹಕಾರಿಯಾಗಿದೆ
- ಶರೀರದ ರೋಗ ನಿರೋಧಕತೆಯನ್ನು ವೃದ್ಧಿಸುವುದು
- ಮಧುಮೇಹ ರೋಗದಿಂದ ಬಳಲುವವರಿಗೆ ಸಕ್ಕರೆ ಪ್ರಮಾಣ, ರಕ್ತದೊತ್ತಡ ಮತ್ತು ಕೊಲೆಸ್ಟ್ರಾಲ್ ಮಟ್ಟವನ್ನು ಹತೋಟಿಯಲ್ಲಿಡುವುದು

ಅಗಸೆಯಲ್ಲಿ ಸಸ್ಯಾಧಾರಿತ ರಾಸಾಯನಿಕಗಳು ಹೆಚ್ಚು ಇದ್ದು ವಿಶಿಷ್ಟ ಪೋಷಕಾಂಶಗಳನ್ನು ಒಳಗೊಂಡಿರುವುದರಿಂದ ಅಗಸೆಯನ್ನು ಬಳಸಿದಲ್ಲಿ ಮನುಷ್ಯರನ್ನು ಅನೇಕ ರೀತಿಯ ರೋಗಗಳಿಂದ ಕಾಪಾಡಲು ಸಹಕಾರಿಯಾಗಿದೆ.

ಲೇಖಕರು	:	**ಶ್ರೀ. ಎಸ್.ಎಂ. ವಾರದ** ವಿಷಯ ತಜ್ಞರು (ಮಣ್ಣು ವಿಜ್ಞಾನ)
	:	**ಶ್ರೀ. ಜಿ.ಬಿ. ವಿಶ್ವನಾಥ** ವಿಷಯ ತಜ್ಞರು (ಬೇಸಾಯ ಶಾಸ್ತ್ರ)
	:	**ಶ್ರೀಮತಿ. ಶ್ರೀದೇವಿ** ವಿಷಯ ತಜ್ಞರು (ಗೃಹ ವಿಜ್ಞಾನ)
	:	**ಡಾ. ಎಸ್.ಎಸ್. ಹಿರೇಮಠ** ವಿಷಯ ತಜ್ಞರು (ಸಸ್ಯ ಸಂರಕ್ಷಣೆ)
ಪ್ರಕಾಶಕರು ಹಾಗು ಸಂಪಾದಕರು	:	**ಶ್ರೀ. ಬಿ.ಆರ್. ಪಾಟೀಲ** ಚೇರ್‌ಮನ್, ಐಸಿಎಆರ್– ಕೆಎಲ್‌ಇ ಕೆವಿಕೆ
ಪುಟ ವಿನ್ಯಾಸ	:	**ಶ್ರೀ. ಮಂಜುನಾಥ ಪಿ.ಐ.** ಗಣಕಯಂತ್ರ ಸಹಾಯಕರು
ಅಕ್ಷರ ಜೋಡಣೆ	:	**ಶ್ರೀಮತಿ. ವೀಣಾ ಬನ್ನೂರು** ಬೆರಳಚ್ಚುಗಾರರು

ಕೆಎಲ್‌ಇ ಸಂಸ್ಥೆಯ

ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ

ಮತ್ತಿಕೊಪ್ಪ – 591 147, ಬೈಲಹೊಂಗಲ ತಾಲೂಕು, ಬೆಳಗಾವಿ ಜಿಲ್ಲೆ

ಅಗಸೆ - ಸಮಗ್ರ ನಿರ್ವಹಣೆ



ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ಮುಂಚೂಣಿ ಗುಚ್ಛ ಪ್ರಾತ್ಯಕ್ಷಿಕೆ

ಪ್ರತಿಗಳು : 500

2016

ಅಗಸೆ ಬೆಳೆ – ಸಮಗ್ರ ನಿರ್ವಹಣೆ

ಅಗಸೆ ಉತ್ತರ ಕರ್ನಾಟಕದ ಹಿಂಗಾರು ಹಂಗಾಮಿನ ಕಿರು ಎಣ್ಣೆಕಾಳಿನ ಬೆಳೆಯಾಗಿದ್ದು, ಓಮೇಗಾ–3 ಎಂಬ ವಿಶೇಷ ಕೊಬ್ಬಿನ ಆಮ್ಲ ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ದಿನನಿತ್ಯದ ಆಹಾರ ಪದ್ಧತಿಯಲ್ಲಿ ಉತ್ತಮ ಪೌಷ್ಟಿಕ ಆಹಾರವಾಗಿ ಉಪಯೋಗಿಸಲಾಗುತ್ತಿದೆ. ಇದರ ಎಣ್ಣೆಯನ್ನು ಬಣ್ಣ, ವಾರ್ನಿಶ್ ಹಾಗೂ ಮುದ್ರಿಕೆಯ ಶಾಯಿ ತಯಾರಿಕೆಯಲ್ಲಿಯೂ ಬಳಸುತ್ತಾರೆ. ಈ ಬೆಳೆಯನ್ನು ಉತ್ತರ ಕರ್ನಾಟಕದ ರಾಯಚೂರು, ವಿಜಯಪುರ, ಬೆಳಗಾವಿ, ಬಾಗಲಕೋಟೆ, ಕಲಬುರಗಿ, ಬೀದರ್, ಕೊಪ್ಪಳ, ಯಾದಗಿರಿ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅಂದಾಜು 11,000 ಹೆಕ್ಟೇರ್ ವಿಸ್ತೀರ್ಣದಲ್ಲಿ ಏಕ ಬೆಳೆ ಮತ್ತು ಅಂತರ ಬೆಳೆ ಪದ್ಧತಿಯಲ್ಲಿ ಬೆಳೆಯಲಾಗುತ್ತಿದೆ.

ತಳಿ	ವಲಯ ಮತ್ತು ಸನ್ನಿವೇಶ	ಬಿತ್ತನೆ ಕಾಲ	ಮಾಗುವ ದಿನಗಳು	ಗುಣಗಳು
ಎನ್ಎಲ್–115	1,2 ಮತ್ತು 3 ಮಳೆಯಾಶ್ರಿತ ಮತ್ತು ನೀರಾವರಿ	ಅಕ್ಟೋಬರ್ 15 ರಿಂದ ನವೆಂಬರ್ 15 ರ ವರೆಗೆ	110	ಬೂದು ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದೆ. ದಪ್ಪವಾದ ಕಾಳುಗಳು, ಹೆಚ್ಚಿನ ಎಣ್ಣೆ ಅಂಶವನ್ನು ಹೊಂದಿರುತ್ತದೆ.
ಎಸ್–36	1, 2 ಮತ್ತು 3 ಮಳೆಯಾಶ್ರಿತ	ಸದರ	120	ಮಧ್ಯಮ ಗಾತ್ರದ ಕಾಳುಗಳು. ಬೂದು ರೋಗಕ್ಕೆ ಮಧ್ಯಮ ನಿರೋಧಕ ಶಕ್ತಿ ಹೊಂದಿದೆ.

ಬಿತ್ತನೆಗೆ ಬೇಕಾಗುವ ಸಾಮಗ್ರಿಗಳು (ಪ್ರತಿ ಹೆಕ್ಟೇರಿಗೆ)

ಸಾಮಗ್ರಿ	ಪ್ರಮಾಣ
ಬಿತ್ತನೆ ಬೀಜ	25 ಕಿ.ಗ್ರಾಂ.
ಕೊಟ್ಟಿಗೆ ಗೊಬ್ಬರ	3 ಟನ್
ಸಾರಜನಕ	40 ಕಿ.ಗ್ರಾಂ.
ರಂಜಕ	20 ಕಿ.ಗ್ರಾಂ.
ಪೊಟ್ಯಾಷ್	20 ಕಿ.ಗ್ರಾಂ.

ಬಿತ್ತನೆ

ಬಿತ್ತುವುದಕ್ಕಿಂತ 2–3 ವಾರಗಳ ಮೊದಲು 3 ಟನ್ ಕಾಂಪೋಸ್ಟ್ ಗೊಬ್ಬರವನ್ನು ಮಣ್ಣಿನಲ್ಲಿ ಬೆರೆಸಿ, ಖುಷ್ಕಿಯಲ್ಲಿ 30 ಸೆಂ.ಮೀ. ಸಾಲಿನಿಂದ ಸಾಲಿಗೆ ಹಾಗೂ ಬೀಜದಿಂದ ಬೀಜಕ್ಕೆ 5 ಸೆಂ.ಮೀ. ಅಂತರದಲ್ಲಿ ಬೀಜವನ್ನು ಬಿತ್ತನೆ ಮಾಡಬೇಕು. ಉತ್ತಮ ಮೊಳಕೆ ಪ್ರಮಾಣವನ್ನು ಪಡೆಯಲು ಬೀಜವನ್ನು 3–5 ಸೆಂ.ಮೀ. ಆಳದ ಒಳಗಡೆ ಮಾತ್ರ ಬಿತ್ತಬೇಕು. ಮಳೆಯಾಶ್ರಿತ ಪ್ರದೇಶದಲ್ಲಿ ಎಲ್ಲ ಗೊಬ್ಬರಗಳನ್ನು ಬಿತ್ತುವ ಸಮಯದಲ್ಲಿ ಹಾಕಬೇಕು ಮತ್ತು ನೀರಾವರಿಯಲ್ಲಿ ಶಿಫಾರಸ್ಸು ಮಾಡಿದ ಅರ್ಧ ಭಾಗದಷ್ಟು ಸಾರಜನಕ ಹಾಗೂ ಪೂರ್ಣ ಪ್ರಮಾಣದ ರಂಜಕ ಮತ್ತು ಪೊಟ್ಯಾಷ್‌ನ್ನು ಮಣ್ಣಿನಲ್ಲಿ ಸೇರಿಸಬೇಕು ಮತ್ತು ಉಳಿದ ಅರ್ಧಭಾಗ ಸಾರಜನಕವನ್ನು ಬಿತ್ತಿದ 35 ದಿನಗಳ ನಂತರ ಹಾಕಬೇಕು.

ಅಂತರ ಬೇಸಾಯ

ಬಿತ್ತಿದ 30 ಹಾಗೂ 60 ದಿವಸಗಳ ನಂತರ ಎಡೆ ಹೊಡೆದು ಸಾಲುಗಳಲ್ಲಿ ಮಣ್ಣು ಏರಿಸಬೇಕು. ಬಿತ್ತಿದ 35 ದಿನಗಳವರೆಗೆ ಕಳೆ ನಿರ್ವಹಣೆ ಮಾಡುವುದರಿಂದ ಹೆಚ್ಚಿನ ಇಳುವರಿಯನ್ನು ಪಡೆಯಬಹುದು.

ಅಂತರ ಬೆಳೆ

ಅಗಸೆಯನ್ನು ಕುಸುಬೆ, ಗೋದಿ ಮತ್ತು ಕಡಲೆಯಲ್ಲಿ (2:1 ಅಥವಾ 3:1) ಅಂತರ ಬೆಳೆಯಾಗಿ ಬೆಳೆಯಬಹುದು.

ಕೊಯ್ಲು

ಎಲೆಗಳು ಒಣಗಿ ಕಾಯಿಗಳು ಹಳದಿ ಬಣ್ಣಕ್ಕೆ ತಿರುಗಿ, ಬೀಜಗಳು ಹೊಳೆಯುವಾಗ ಕಟಾವು ಮಾಡಲು ಸೂಕ್ತ ಸಮಯವಾಗಿರುತ್ತದೆ.



ಇಳುವರಿ

ನೀರಾವರಿ : 10–12 ಕ್ವಿ./ಹೆ.
ಮಳೆಯಾಶ್ರಿತ : 06–08 ಕ್ವಿ./ಹೆ.

ಸಸ್ಯ ಸಂರಕ್ಷಣೆ ಕ್ರಮಗಳು

ಕ್ರ.ಸಂ.	ಪೀಡೆ	ಲಕ್ಷಣ ಮತ್ತು ಹಾನಿ	ನಿರ್ವಹಣಾ ಕ್ರಮಗಳು
1	ಮೊಗ್ಗಿನ ನೊಣ	ಕೀಟವು ಮೊಗ್ಗನ್ನು ತಿನ್ನುವುದರಿಂದ ಬೀಜ ಕಟ್ಟದೇ ಕಾಳು ಟೊಳ್ಳಾಗುತ್ತದೆ.	ಮೊಗ್ಗು ಬರುವ ಸಮಯದಲ್ಲಿ 0.3 ಮಿ.ಲೀ. ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್. ಕೀಟನಾಶಕವನ್ನು ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.
2	ಎಲೆ ಕತ್ತರಿಸುವ ಹುಳು	ಸ್ಪೊಡೆಪ್ಟೆರಾ ಗುಂಪಿಗೆ ಸೇರಿದ ಮರಿಹುಳು ಎಲೆಗಳನ್ನು ತಿನ್ನುತ್ತವೆ.	ಬಿತ್ತಿದ 25–30 ದಿನಗಳಲ್ಲಿ 0.5 ಮಿ.ಲೀ. ಲ್ಯಾಂಬ್ಡಾಸೈಲೋಥ್ರಿನ್ 5 ಇ.ಸಿ. ಕೀಟನಾಶಕವನ್ನು ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.
3	ಬೂದು ರೋಗ	ಎಲೆಗಳ ಮೇಲೆ ಹಳದಿ ಹಸಿರು ಬಣ್ಣದ ಮಚ್ಚೆಗಳು ಕಂಡು ಬಂದು, ನಂತರ ಎಲೆಗಳ ಮೇಲೆ ಬಿಳಬಣ್ಣದ ಪುಡಿ ಕಂಡು ಬಂದು, ಎಲೆಗಳು ಹಳದಿಯಾಗಿ ಉದುರುತ್ತವೆ. ಇದಲ್ಲದೆ ರೋಗವು ಎಲೆಯ ತೊಟ್ಟು ಕಾಂಡ ಮತ್ತು ಮೊಗ್ಗಿನ ಮೇಲೂ ಸಹ ಕಂಡು ಬರುತ್ತದೆ.	1 ಗ್ರಾಂ. ಕಾರ್ಬನ್‌ಡೈಜಿವನ್ ಶಿಲೀಂಧ್ರನಾಶಕವನ್ನು ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.
4	ಬೇರು ಕೊಳೆ ರೋಗ	ರೋಗಬಾಧಿತ ಗಿಡಗಳ ಎಲೆಗಳು ಪ್ರಾರಂಭದಲ್ಲಿ ಬಾಡಿ ನಂತರ ಒಣಗಲು ಪ್ರಾರಂಭಿಸುತ್ತವೆ. ರೋಗಪೀಡಿತ ಗಿಡಗಳನ್ನು ಕಿತ್ತು ನೋಡಿದಾಗ ಅವುಗಳ ಬೇರು ಕೊಳೆತು, ಬೇರಿನ ಹೊರ ತೊಗಟೆ ಹಾಳಾಗಿರುತ್ತವೆ.	2 ಗ್ರಾಂ. ಕಾರ್ಬನ್‌ಡೈಜಿಮ್ ಅಥವಾ 3 ಗ್ರಾಂ. ಕ್ಯಾಪ್ಟಾನ್ ಪ್ರತಿ ಕಿ.ಗ್ರಾಂ. ಬೀಜಕ್ಕೆ ಬೀಜೋಪಚಾರ ಮಾಡಬೇಕು.